9	ನಾಲ್ಕು ಎತ್ತುಗಳು ವಗೈರೆಗಳಿಂದ ಎಳಿಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಆಗಿದ್ದರೆ	0	8	0
10	ಡಿಟೋ ಡಿಟೋ ಭರ್ತಿಇಲ್ಲದಿದ್ದರೆ	0	4	0
11	ಎರ್ಡು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ, ಹೇಸರು ಕತ್ತೆಗಳಿಂದ ಎಳಿಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	4	0
12	ಡಿಟೋ ಭರ್ತಿ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟ್ಯೆ ಇದ್ದರೆ	0	1	0
14	ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದಿದ್ದರೆ	0	4	0
18	ಪ್ರತಿ ಕುದರೆಗೂ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	ಹೊರೆ ಇಲ್ಲದ ಯಾ ಹಿಡದುಕೊಂಡು ಹೋಗುವ ಪ್ರತಿ 1 ಕುದರೆಗೂ	0	0	9
20	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಇಲ್ಲದ್ದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	6
23	ಹೊರೆ ಇಲ್ಲದೆ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24	ಪ್ರತಿ ಕುರಿ, ವೇಕೆ ಯಾ ಸಂದಿ	0	0	1
25	ಎಂಟು ಜೋಯಿಗಳ ವಡನೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾಸಿಗೂ	1	0	0
26	ಆರು ಜೋಯಿಗಳೊಡನೆ ಡಿಟೋ	0	12	0
27	ನಾಲ್ಕು ಜೋಯಿಗಳೊಡನೆ ಡಿಟೋ	0	8	0
28	ಇಬ್ಬರು ಜೋಯಿಗಳೊಡನೆ ಡಿಟೋ	0	4	0

ನಡದು ಬರುವ ಮಾರ್ಗಸ್ತರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲ.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯೂಟ ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಇಸಿ ಹಾರ್‌ನಾಮೆ.

ತಾರೀಖು 4ನೇ ಏಪ್ರೆಲ್ 1896ನೇ ಇಸವಿ

ಇದರಿಂದ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ ಇದರಡಿ ನಮೂದಿಸಿರುವ ಚಾಬೀನಿ ಮತ್ತು ಜೊಂಬು ಶಿವಮೊಗ್ಗಾ ಡಿಸ್ಟ್ರಿಕ್ಟನ ಡಿಪೋಗಳಲ್ಲಿ ಅವುಗಳ ಬಾಜೂವಲ್ಲಿ ಕಾಣಿಕಿರುವ ತಾರೀಖುಗಳಲ್ಲಿ ಫಾರೆಸ್ಟ್ ಆಫಿಸರ ಮತ್ತು ಡೆಪ್ಯೂಟಿ ಕಮ್ಮಿಷನರ್ ಯಾ ಆ ವರಿಂದ ನೇಮಿಸಲ್ಪಡುವ ಇತರ ಆಫಿಸರಗಳಿಂದ ಹರಾಜು ಮಾಡಿಸಲ್ಪಡುವದು.

ನಂಬರು.	ಡಿಪೋಗಳ ಹೆಸರು.	ಹರಾಜು ತಾರೀಖು	ಸಾಗುವಾನಿ ನಾಮೂ.	ರಿಜರ್ವಡ್ ನಾಮೂ.	ಆ ವಿಜರ್ವಡ್ ನಾಮೂ	ಸಾಗುವಾನಿ ಬೆಲಗು ಮತ್ತು ಕುಂಡು.	ಕಾಡುಜಾತಿ ಬೆಲಗು.	ಜೊಂಬು.	ಪರ.
1	ಆನವಟ್ಟಿ	1 5 96	30	...	...	151	43	1,325	ಹೊಸ್ಕೊಪ್ಪ
2	ತಿರಳಕೊಪ್ಪ	4 5 96	26	89	2	151	23	393	
3	ಸಕ್ರಿಪುರ	7 5 96	4	32	2	11	...	1,000	
4	ಚನ್ನಗಿರಿ	11 5 96	..	...	..	250	..	2,000	
5	ಪುಬ್ರಾಣಿ	13 5 96	..	..	..	42	..	1,500	
6	ಆಯನೂರು	1 6 96	100	100	25	200	..	5,000	
7	ಶಿವಮೊಗ್ಗಾ	8 6 96	110	163	7	36	100	3,864	
8	ಕಣಬೂರು	12 6 96	100	130	20	..	..	..	
9	ಸಮುದ್ರಹಳ್ಳಿ	13 6 96	..	125	25	..	..	..	

ಹರಾಜು ಪರತ್ತುಗಳು:—ತಾರೀಖು 25—4—95ನೇ ನಂಬರ 15ನೇ ಮೈಸೂರು ಗೆಜೆಟಿನಲ್ಲಿ ಪ್ರಾಯಿಷ್ಠಾಗಿರುವ ತಾರೀಖು 15—3—95ನೇ ನಂಬರ 15,229.—155—92ನೇ ನೋಟಿಫಿಕೇರ್ಷ ನೋಡತಕ್ಕದ್ದು.

ಸಿ. ನಾರಾಯಣರಾವ್,
ಡೆಪ್ಯೂಟ ಕನಸರವೇಟರ್.

322

1896ನೇ ಇಸವಿ ಏಪ್ರಿಲ್ 1ನೇ ಮಠ್ತಂ, ಇದರಿಂದ ಸಮಸ್ತ ಜನಗ ಗೂ ತಿಳಿಯಪಡಿಸುವದೇನಂದರೆ, --

I. ಈ ಕೆಳಗೆ ಕಂಡ ಶಿವಮೊಗ್ಗ ಡಿಸ್ಟ್ರಿಕ್ಟ್ ತಾಲ್ಲೂಕುಗಳ ಬಗನಿ ಕೇಂದಿ ವೃತಾಲ್ ಮತ್ತು ಮೂರುವ ಹಕ್ಕು ಸ್ಯ 1896ನೇ ಜುಲೈ ಗುರ್ಯೇ ಲಾಗಾಯತು 1897ನೇ ಜೂ: 30ರ ವರಿಗೆ ಗ್ಯಾಮವಾರಾಗಿ ಆಗಲಿ ಅಥವಾ ಗ್ಯಾಮ ಸಮುದಾಯತ್ವೇನ ಆಗಲಿ ಆಯಾ ತಾಲ್ಲೂಕು ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ವಳಪಟ್ಟು ಆ ಯಾ ತಾಲ್ಲೂಕು ಕಚೇರಿ ರೂಬರೂ ಡೆಪ್ಯೂಟಿ ಕಮ್ಮಿಷನರವರಿಂದ ಆಗಲಿ ಅಥವಾ ವಬ್ಬರು ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

	ತಾಲ್ಲೂಕು.	ಹರಾಜು ತಾರೀಖು.	
1	ತೀರ್ಥಹಳ್ಳಿ	ಸ್ಯ 1896ನೇ ಮೇ	11—12
2	ಸೊರಬ	ಡಿಟೋ	14—15
3	ಸಾಗರ	ಡಿಟೋ	18—19
4	ನಗರ	ಡಿಟೋ	21—22
5	ತೀರ್ಥಹಳ್ಳಿ	ಡಿಟೋ	25—26

II. ಪ್ರತಿ ಬಂದು ಸರಕಲ್ ಗುತ್ತಿಯನ್ನು ಚಡದರಖಾಸ್ತುದಾರನಿಗೆ ಕೊಡಲ್ಪಡುವದು, (ಸದರೀ ಚಡದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲ್‌ಗಳ ಮೊಬಲಗ್ಯೆಕಮ್ಮಿ ಇರಕೂಡದು) ಈ ಹರಾಜು ಅಸಿಸ್ಟೆಂಟ್ ಕಮ್ಮಿಷನರವರಿಂದ ಮಾಡಲ್ಪಟ್ಟಲ್ಲಿ ಅದು ಡೆಪ್ಯೂಟಿ ಕಮ್ಮಿಷನರವರ ಮಂಜೂರಿಗೆ ಬಳಪಟ್ಟು ಇರತಕ್ಕದ್ದಾಗಿ ಇರುತ್ತೆ ಅಂಥಾ ಹರಾಜಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸದರೀ ಯವರು ಡೆಪ್ಯೂಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು, ಡೆಪ್ಯೂಟಿ ಕಮ್ಮಿಷನರವರು ಯಾವದೊಂದು ದರಖಾಸ್ತೂ ಅಥವಾ ಚಡದರ ಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

III. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಿಯಾಗಲಿ ಹಾಜರಾಗಬೇಕು. ಡೆಪ್ಯೂಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಚಡದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡತಕ್ಕ ಆಫಿಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲ್ ಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೆ ಅದರ ಹನ್ನೆರಡರಲ್ಲಿ ಬಂದು ಭಾಗದ ಮೊಬಲಗು ಒಡನೆ ಡಿಪಾಜಿಟ್ ಮಾಡಬೇಕು ಡೆಪ್ಯೂಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ ಹಿಂದೆ ಹಾಜರು ಮಾಡಿದ ಡಿಪಾಜಿಟ್ ಮೊಬಲಗು ಕೇರಿ ಸಾಲ್ ಗುತ್ತಿಗೆ ಮೊಬಲಗಿನ ಮೂರು ತಿಂಗಳ ಖಿಸ್ತು ಮೊಬಲಗು ನಗದಾಗಿಯಾಗಲಿ ಅಥವಾ ಗವರ್ಮೆಂಟ್ ಪತ್ರ ಮೂಲಕವಾಗಿಯಾಗಲಿ ಅಮಲ್ದಾರ್‌ಲ್ಲಿ ಹಾಜರ್ಮಾಡಬೇಕು. ಹಾಗೆ ಗವರ್ಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟ್ರುಷರತ್ತು ನೆರವೇರಿಕೆ ಖಾತ್ರಿಗಾಗಿ ಹಾಜರ್ಮಾಡಿದೆ ಎಂದು ಸದರೀ ಪತ್ರ ಜೈಲ್ ಡೆಪ್ಯೂಟಿ ಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿಕೊಡತಕ್ಕದ್ದಾಗಿ ಇರುತ್ತೆ ಅಥವಾ ಮೇಲ್ತಂಡಂತೆ ಕೊಡತಕ್ಕ ಜಾಮೀನಿ ಮೊಬಲಗ್ಗಾಗಿ ಅರವಾಶಿ ನಗದಾಗಿಯಾಗಲಿ ಅಥವಾ ಮೇಲ್ತಂಡಂತೆ ಇಂಡಾರ್ಸ್‌ಮಾಡಿ ಕೊಟ್ಟು ಗವರ್ಮೆಂಟ್ ಪತ್ರ ಮೂಲಕವಾಗಿಯಾಗಲಿ ಬಾಕಿ ಅರ್ಧ ಭಾಗ ಸ್ಥಿರಸೊತ್ತು ಮೂಲಕ ಜಾಮೀನ್ ಕೊಡಬಹುದು ಹಾಗೆ ಆಧಾರ ಮಾಡುವ ಸ್ಥಿರಸೊತ್ತಿನ ಬೆಲೆ ಜಾಮೀನ್ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು, ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಠೇವಣಿ ಇಟ್ಟ ಮೊಬಲಗು ಆಖೈರ್ ಮೂರು ತಿಂಗಳ ಖಿಸ್ತಿನ ಟಗ್ಯೇ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜುದಾರನು ಇದರಲ್ಲಿ ಕಂಡ ಪರತ್ತುಗಳಿಗೆ ಬಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೇನೆಂತ ಕ್ರಮವಾದ ಸ್ಟ್ಯಾಂಪು ಕಾಗದದ ಮೇಲೆ ಮೂಮೂಲಿನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿ ಇರುತ್ತೆ.

IV. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್ಮಾಡದೆ ತಪ್ಪಿದರೂ, ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ, ಷರೂ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬ್ ಪುನಹ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿಯಾಗಲಿ ವಿಲೇವಾರಿ ಮಾಡಲ್ಪಡುತ್ತೆ. ಹಾಗೆ ನಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಯೇನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು ಕಂದಾಯ್ದ ಬಾಕಿಯಂತೆ ಸದರೀಯವನ ಜಿಂದಗಿ ಜಪ್ತೀ ಹರಾಜು ಮೂಲಕ ವಸೂಲ್ಮಾಡಿಕೊಳ್ಳಲ್ಪಡುತ್ತೆ.

V. ಈಚಲ್ ಕೇಂದಿ, ಕಂಟ್ರಾಕ್ಟ್ ಸಂಬಂಧದಲ್ಲಿ ವಿಧಾಯಕವಾಗಿರುವ ಷರತ್ತುಗಳು ಈ ಬಗನೀ ಕೇಂದಿ ಇಜಾರೆ ಬಗ್ಯೂ ಅನ್ವಯಿಸಲ್ಪಡುತ್ತೆ.

VI. ಹಿಂಬಿನ ಸಾಲ್‌ಗಳ ಬಗನೀ ಕೇಂದಿ ಹುಟ್ಟುವಳಿ ಮತ್ತು ಇತರ ತಪ್ಶೀಲ್ ತಿಳಿಯಬೇಕಾಗಿದ್ದರೆ ತಾಲ್ಲೂಕು ಅಮಲ್ದಾರು ಅಥವಾ ತಿರಸ್ತೇದಾರಲ್ಲಿ ದರಖಾಸ್ತು ಕೊಟ್ಟು ತಿಳಿಕೊಳ್ಳಬಹುದು.

ಎಂ. ರಾಮಚಂದ್ರರಾವ್,
ಫಾರ್ ಅಫಿಷಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್.